ಕಾಡಲಿಲ್ಲ? ವ್ಯಂಗ್ಯ ಏನಂದರೆ, 'ಅಳಿದ ಮೇಲೆ' ಇದೆಯಲ್ಲ, ಅದು ನಂಬಿಕೆಯ ಬಹುವಚನ. ಆಸ್ತಿಕರು ಮತ್ತು ನಾಸ್ತಿಕರು ಒಟ್ಟೊಟ್ಟಿಗೇ ಇರಬಹುದಾದ ಒಂದು ಸಾಧ್ಯತೆ. ಆಸ್ತಿಕನ ನಂಬಿಕೆ ಪ್ರಾಮಾಣಿಕವಾಗಿದ್ದರೆ ಅದನ್ನು ಗೌರವಿಸುವ ಸಾಧ್ಯತೆ. ಇದೆಲ್ಲವನ್ನು ಚಿತ್ರಿಸುವ ಕಾದಂಬರಿ ಅದು. ಈ ಕಾದಂಬರಿ ಇಟ್ಟುಕೊಂಡು ಕಾರ್ನಾಡರು ಒಂದು ಕತೇನೇ ಬರೆದರು. ಇಟೀಸ್ ಎ ಟ್ರಿಬ್ಯೂಟ್ ಟು ಕಾರಂತ್ ಬೈ ಗಿರೀಶ್. ಒನ್ ಗ್ರೇಟ್ ಆಥರ್ ಗೀವಿಂಗ್ ಎ ಟ್ರಿಬ್ಯೂಟ್ ಟು ಅನದರ್ ಗ್ರೇಟ್ ಆಥರ್. ಲೇಖಕರ ಘೋಷಿತ ಸಿದ್ಧಾಂತಗಳು ಏನೇಯಿರಲಿ, ಅದರಾಚೆ ಅವರ ಬರವಣಿಗೆ ಏನು ಅಂತ ನೋಡಬೇಕು. ಅನಂತಮೂರ್ತಿಯವರು ಕೋಮುವಾದವನ್ನು ಪ್ರತಿರೋಧಿಸುತ್ತ, ನಮ್ಮ ಸಾಂಪ್ರದಾಯಿಕ ಧರ್ಮಗಳಲ್ಲಿರುವ ವಿವೇಕದ ಕುರಿತು ಚರ್ಚೆ ಮಾಡಿದರು. ಆದರೆ ತೇಜಸ್ವಿ ಧರ್ಮಗಳನ್ನು ಒರಟಾಗಿ ತಿರಸ್ಕರಿದರು.

> ಬಾಬರಿ ಮಸೀದಿ ಉರುಳಿದ ಮಾರನೇ ದಿನ ಅನಂತಮೂರ್ತಿ ಉಡುಪಿಯಲ್ಲಿದ್ದರು. ಅವತ್ತು ಸಂಜೆ ಅವರೊಂದು ಅಡಿಗರ ಮೇಲೆ ಭಾಷಣ ಇತ್ತು. ನಾನು ಬಹಳ ನಿರೀಕ್ಷೆಯಿಂದ ಕಾದಿದ್ದೆ, ಏನಾದ್ರು ಅಯೋಧ್ಯೆ ಬಗ್ಗೆ ಪ್ರಸ್ತಾಪಿಸ್ತಾರೆ ಅಂತ. ಪ್ರಸ್ತಾಪಿಸಲೇ ಇಲ್ಲ. ನನಗಿದು ನಿರಾಶೆ ಆಯ್ತು.

ತೇಜಸ್ವಿಯವರು ಧರ್ಮಗಳನ್ನು ಬ್ಲಂಟಾಗಿ ನೋಡಿದರು. ಅವರಿಗಾಗಲಿ ಕುವೆಂಪುಗಾಗಲಿ ಒಂದು ಜೀವಂತ ಮುಸ್ಲಿಂ ಪಾತ್ರವನ್ನು ಸೃಷ್ಟಿ ಮಾಡೋಕೆ ಆಗಲಿಲ್ಲ. ಕನ್ನಡದಲ್ಲಿ ಜೀವಂತವಾದ ಮುಸ್ಲಿಂ ಪಾತ್ರವನ್ನು ಮುಸ್ಲಿಂ ಲೇಖಕರು ಕೂಡ ಮಾಡಿಲ್ಲ ಅಂತಲೇ ನನ್ನ ಅಭಿಪ್ರಾಯ. ಅವರು ಕೂಡ ಹಿಂದೂ ಲಿಬರಲ್‌ಗಳು ಏನನ್ನು ಬಯಸ್ತಾರೆ ಅಂತ ಯೋಚನೆ ಮಾಡಿ ಅದಕ್ಕೆ ತಕ್ಕಹಾಗೆ ಬರೆದ ಹಾಗೆ ಕಾಣ್ತದೆ. ಒಬ್ಬ ಮುಸ್ಲಿಮನ ಕಷ್ಟಗಳೇನು ಆತಂಕಗಳೇನು ಅನ್ನೋದನ್ನು ನಾನು ಸಾಹಿತ್ಯೇತರ ಬರಹಗಳಿಂದಲೇ ಗ್ರಹಿಸುವುದಾದರೆ, ಅದು ನಮ್ಮ ಸಾಹಿತ್ಯದ ಮಿತಿ ಅಲ್ಲವಾ?

◆ ಮತೀಯವಾದಿ ರಾಜಕಾರಣವನ್ನು ಮುಖಾಮುಖಿ ಮಾಡೋಕೆ ವಿಚಾರವಾದದ ಹತ್ಯಾರಗಳು ಸಾಲದು. ಮತೀಯವಾದಿಯಲ್ಲದ ಜನ ಆಚರಿಸುವ ಧರ್ಮಗಳಲ್ಲಿ ಪರ್ಯಾಯವಾದುದು ಇರಬಹುದು ಅನ್ನೋ ಹುಡುಕಾಟ ಕನ್ನಡದಲ್ಲಿ ನಡೀತಿದೆ. ಇದು ಜನರ ಜತೆ ಸಾವಯವ ಸಕೀಲ ಸಂಬಂಧ ಪಡೆದುಕೊಳ್ಳೋಕೆ ವಿಚಾರವಾದ ಮಾಡುತ್ತಿರುವ ಮರುಚಿಂತನೆ ಇರಬಹುದಾ?

ನಾನು ಆ ಜನರ ಪರವಾಗಿ ಯಾಕೆ ಮಾತಾಡಬೇಕು? ಧರ್ಮ ಅಂದರೆ ನನ್ನ ಧರ್ಮ ತಾನೇ? ಸಮುದಾಯದ ಧರ್ಮ ಅಲ್ಲ. ಸಮುದಾಯದ ಆಚರಣೆಯಲ್ಲ. ಕೆಲವರು ನನಗೆ ಯಾವಾಗಲೂ ಹಂಗಿಸ್ತಾರೆ: 'ನೀವು ಜನರ ಭಾಷೆಯಲ್ಲಿ ಮಾತಾಡಲ್ಲ. ನಿಮಗೆ ಜನರ ಭಾಷೇನೆ ಗೊತ್ತಿಲ್ಲ' ಅಂತ. ಜನರ ಭಾಷೆ ಅಂದರೆ ಯಾವುದು? ಇವತ್ತು ಕರ್ನಾಟಕದ ಜನರ ಭಾಷೆಯಲ್ಲಿ ನಾನು ಮಾತಾಡಿದರೆ ಗೋರಕ್ಷಕರನ್ನೂ ಒಪ್ಪಕೋಬೇಕಾಗುತ್ತದೆ. ಅದಕ್ಕೆ ನಾನು ಕೊಡುವ ಉತ್ತರ – ಅದು ಜರ್ಮನಿಯ ತತ್ತ್ವಶಾಸ್ತ್ರಜ್ಞ ಅಡೋರ್ನೊ ಕೊಟ್ಟ ಉತ್ತರ ಕೂಡ: 'ನಿಮ್ಮ ಮನೆಯವರಲ್ಲಿ ಮನೆಯ ಒಳಗಿನವನಾಗಿರುವುದು ಸದ್ಯಕ್ಕೆ ಅನೈತಿಕ. ನಿಮಗೆ ಆ ಚಾಯ್ಸ್ ಇಲ್ಲ.'

◆ ಈ ಮೂಲಕ ಏನು ಹೇಳ್ತಿದೀರಿ?